ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜೂನ್ 11, 2020**

# ಪತ್ರಿಕಾ ಆಮಂತ್ರಣ

**1. ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ –2020**

**ಉದ್ಘಾಟನೆ : ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕಾರ್ಮಿಕ ಆಯುಕ್ತರು**

**ದಿನಾಂಕ : 12–06–2020 ಶುಕ್ರವಾರ ಸಮಯ : ಬೆಳಿಗ್ಗೆ 10–30 ಗಂಟೆಗೆ**

**ಸ್ಥಳ : ಕಲ್ಯಾಣ ಸುರಕ್ಷಾ ಭವನ, ಕಾರ್ಮಿಕ ಇಲಾಖೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ

## ಅನಧಿಕೃತ ಆಂಗ್ಲ ಶಾಲೆ ವಿರುದ್ಧ ಕ್ರಮಕ್ಕೆ ಆದೇಶ

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ಬೆಂಗಳೂರಿನ ಚೋಳೂರು ಪಾಳ್ಯದ ಅನುದಾನಿತ ಕನ್ನಡ ಪ್ರೌಢಶಾಲೆಯ ಬಳಿ ಅನಧಿಕೃತವಾಗಿ ಆರಂಭವಾಗಿರುವ ಶ್ವೇತಾ ಪಬ್ಲಿಕ್ ಶಾಲೆ (ಸೇಂಟ್ ಮಿರಾಸ್ ಪಬ್ಲಿಕ್ ಶಾಲೆ) ಪ್ರಾರಂಭಿಸಿರುವುದರಿಂದ ಅಧಿಕೃತ ಕನ್ನಡ ಶಾಲೆಗೆ ಧಕ್ಕೆಯಾಗಿರುವುದರಿಂದ ಅನುಮತಿಯಿಲ್ಲದೇ ಪ್ರಾರಂಭವಾದ ಶಾಲೆ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಸಚಿವರನ್ನು ಕೋರಿದ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ಸದರಿ ಅನಧಿಕೃತ ಶ್ವೇತಾ ಪಬ್ಲಿಕ್ ಶಾಲೆಯ (ಸೇಂಟ್ ಮಿರಾಸ್ ಪಬ್ಲಿಕ್ ಶಾಲೆ) ನೊಂದಣಿ ರದ್ದು ಪಡಿಸಲು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ಸೂಚನೆ ನೀಡಿದ್ದಾರೆ.

## ಚಲನಚಿತ್ರ ಪ್ರಶಸ್ತಿ ಆಕ್ಷೇಪಣೆ ಸಲ್ಲಿಸಲು ಅವಕಾಶ

ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)

2019ನೇ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿಗಾಗಿ ಪತ್ರಿಕಾ ಜಾಹೀರಾತು ಮೂಲಕ 01/01/2020 ರಿಂದ 31/01/2020 ಅರ್ಜಿ ಆಹ್ವಾನಿಸಲಾಗಿತ್ತು. ಒಟ್ಟು 179 ಚಲನಚಿತ್ರ ನಿರ್ಮಾಪಕರಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಸದರಿ ಅರ್ಜಿಗಳನ್ನು ಹೊರತುಪಡಿಸಿ ಇನ್ನೂ ಯಾವುದಾದರು ಚಿತ್ರ ನಿರ್ಮಾಪಕರು ನಿಗದಿತ ಅವಧಿಯೊಳಗೆ ಇಲಾಖೆಗೆ ಅರ್ಜಿ ಸಲ್ಲಿಸಿದ್ದು, ಪಟ್ಟಿಯಲ್ಲಿ ಬಿಟ್ಟು ಹೋಗಿದ್ದಲ್ಲಿ ಅಂತಹ ಚಿತ್ರ ನಿರ್ಮಾಪಕರು ದಿನಾಂಕ: 20-06-2020 ರೊಳಗಾಗಿ ಉಪನಿರ್ದೇಶಕರು, ಚಲನಚಿತ್ರ ಶಾಖೆ ಇವರಿಗೆ ಇಲಾಖೆಯು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನೀಡಿರುವ ಸ್ವೀಕೃತಿಯ **(Acknowledgement)** ಮಾಹಿತಿಯನ್ನು ನೀಡಿದರೆ ಅರ್ಜಿಯನ್ನು ಪರಿಗಣಿಸಲಾಗುವುದು.

ಚಿತ್ರಗಳ ಪೈಕಿ ರಿಮೇಕ್ ಅಥವಾ ಡಬ್ಬಿಂಗ್ ಚಿತ್ರಗಳಾಗಿ ನಿರ್ಮಾಣಗೊಂಡ ಚಿತ್ರಗಳೆಂದು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 20-06-2020 ರೊಳಗಾಗಿ ಸೂಕ್ತ ದಾಖಲೆಯೊಂದಿಗೆ ಉಪನಿರ್ದೇಶಕರು, ಚಲನಚಿತ್ರ ಶಾಖೆ ಇವರಿಗೆ ಖುದ್ದಾಗಿ ನೀಡುವಂತೆ ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ನೀಡುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಇಲಾಖೆಯ ವೆಬ್ ಸೈಟ್ ವಿಳಾಸ dipr.karnataka.gov.in ಅಲ್ಲಿ ವೀಕ್ಷಿಸಬಹುದೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಣೆ ತಿಳಿಸಿದೆ

## ಸಾರಿಗೆ ಅದಾಲತ್

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಬೆಂಗಳೂರು(ದಕ್ಷಿಣ), ಜಯನಗರ ಇಲ್ಲಿ ಜೂನ್ 18 ರ ಮಧ್ಯಾಹ್ನ 03–00 ಘಂಟೆಗೆ ಸಾರಿಗೆ ಅದಾಲತ್‌ನ್ನು ಕಛೇರಿಯ 2 ನೇ ಮಹಡಿಯ ಆಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ. ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಅಹವಾಲು ಮತ್ತು ಕೊರತೆಗಳ ಪರಿಹಾರಕ್ಕಾಗಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## SARIGE ADALAT

Bengaluru, June 11 (Karnataka Information)

SARIGE ADALAT will be held on Thursday 18-06-2020 at 3.pm in the 2nd floor, Auditorium by the Office of the Deputy Commissioner for Transport and Senior Regional Transport Officer, Bangalore (South) Jayanagar. Senior Officers of the Transport Department will be participating in the Adalat. Publics are requested to avail this opportunity for redressal of their grievances, if any says official press release.

## ಭ್ರಷ್ಟಾಚಾರ ಆರೋಪಿತ 4 ಅಧಿಕಾರಿಗಳ ವಿರುದ್ಧ ದಾಳಿ

## ಶೋಧನೆ ವೇಳೆ ಕೋಟ್ಯಾಂತರ ರೂಪಾಯಿ ಮೊತ್ತದ ಚರ ಮತ್ತು ಸ್ಥಿರ ಆಸ್ತಿಗಳ ಪತ್ತೆ

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ದಿನಾಂಕ: 10.06.2020 ರಂದು ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳವು ರಾಜ್ಯದ 4 **ವಿವಿಧ ಸರ್ಕಾರಿ ನೌಕರರು** ತಮ್ಮ ಬಲ್ಲ ಮೂಲಗಳಗಿಂತ ಅಸಮತೋಲನ ಆಸ್ತಿ–ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ **14 ಸ್ಥಳಗಳ ಮೇಲೆ** ದಾಳಿ ನಡೆಸಲಾಗಿರುತ್ತದೆ. ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡಸಲಾದ ಸ್ಥಳಗಳಲ್ಲಿ ತನಿಖೆಯಲ್ಲಿ ಪತ್ತೆಯಾದ ಆರೋಪಿತ ಸರ್ಕಾರಿ ನೌಕರರ ಚರ ಮತ್ತು ಸ್ಥಿರ ಆಸ್ತಿಗಳ ವಿವರ ಈ ಕೆಳಕಂಡಂತಿರುತ್ತವೆ.

1. **ಶ್ರೀ. ಎಲ್. ಸತೀಶ್ ಕುಮಾರ್, ಹೆಚ್ಚುವರಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಬೆಂಗಳೂರು.**
   ಸರಸ್ವತಿ ಪುರಂ, ಮೈಸೂರು ಇಲ್ಲಿ 1 ವಾಸದ ಮನೆ, ಬೆಂಗಳೂರು ನಗರದಲ್ಲಿ 2 ಫ್ಲಾಟ್‌ಗಳು, 5 ನಿವೇಶನಗಳು, ಚಿನ್ನ 1 ಕೆ.ಜಿ 17 ಗ್ರಾಂ, ಬೆಳ್ಳಿ 7 ಕೆ.ಜಿ 290 ಗ್ರಾಂ, 1 ಟೊಯೋಟಾ ಇನ್ನೋವಾ ಕಾರ್, 1 ಹೋಂಡಾ ಅಮೇಜ್ ಕಾರ್, 1 ದ್ವಿಚಕ್ರ ವಾಹನ, ನಗದು ₹ 2 ಲಕ್ಷ 92 ಸಾವಿರ.

2. **ಶ್ರೀ ಎನ್.ರಾಮಕೃಷ್ಣ, ವಲಯ ಅರಣ್ಯ ಅಧಿಕಾರಿ, ಶ್ರೀನಿವಾಸಪುರ ವಲಯ ಕೋಲಾರ ಜಿಲ್ಲೆ.**
   ಕೋಲಾರದಲ್ಲಿ 1 ಮತ್ತು ಬೆಂಗಳೂರಿನಲ್ಲಿ 2 ವಾಸದ ಮನೆಗಳು, ಬೆಂಗಳೂರು ನಗರದಲ್ಲಿ 3 ನಿವೇಶನಗಳು, ಬಂಗಾರಪೇಟೆ ತಾಲ್ಲೂಕು, ಚಿನ್ನಕಾಮನಹಳ್ಳಿಯಲ್ಲಿ 1 ಎಕರೆ 23 ಗುಂಟೆ ಕೃಷಿ ಜಮೀನು, ಚಿನ್ನ 877 ಗ್ರಾಂ, ಬೆಳ್ಳಿ 1 ಕೆ.ಜಿ 586 ಗ್ರಾಂ, 1 ಮಾರುತಿ ಸ್ವಿಫ್ಟ್ ಕಾರ್, 3 ದ್ವಿಚಕ್ರ ವಾಹನಗಳು, ವಿವಿಧ ಬ್ಯಾಂಕ್ ಖಾತೆಗಳಲ್ಲಿ/ಠೇವಣಿಗಳು ₹ 8 ಲಕ್ಷ 22 ಸಾವಿರ ಪತ್ತೆಯಾಗಿರುತ್ತದೆ, ನಗದು ₹ 2 ಲಕ್ಷ 27 ಸಾವಿರ ಮತ್ತು ₹ 26 ಲಕ್ಷ 97 ಸಾವಿರ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿರುತ್ತವೆ.
3. **ಶ್ರೀ. ಗೋಪಶೆಟ್ಟಿ ಮಲ್ಲಿಕಾರ್ಜುನ, ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ರಾಯಚೂರು.**
   ರಾಯಚೂರಿನಲ್ಲಿ 3 ಹಾಗೂ ಬೆಂಗಳೂರಿನಲ್ಲಿ 1 ವಾಸದ ಮನೆ, ರಾಯಚೂರಿನಲ್ಲಿ 2 ಫ್ಲಾಟ್‌ಗಳು, ರಾಯಚೂರಿನಲ್ಲಿ 1 ಮತ್ತು ಕೊಪ್ಪಳಲ್ಲಿ 2 ನಿವೇಶನಗಳು, ಚಿನ್ನ 1 ಕೆ.ಜಿ 394 ಗ್ರಾಂ, ಬೆಳ್ಳಿ 10 ಕೆ.ಜಿ 925 ಗ್ರಾಂ, ನಗದು ₹ 74 ಸಾವಿರ, ರಾಯಚೂರು ಜಿಲ್ಲೆಯಲ್ಲಿ 1 ಪೆಟ್ರೋಲ್ ಬಂಕ್, 2 ಟ್ರಾಕ್ಟರ್ ಷೋ ರೂಂಗಳು, 8 ಎಕರೆ 38 ಗುಂಟೆ ಕೃಷಿ ಜಮೀನು, 1 ಹುಂಡೈ ಕಾರು, 1 ಟೊಯೋಟಾ ಇನ್ನೋವಾ ಕಾರು, 1 ದ್ವಿಚಕ್ರ ವಾಹನ ಮತ್ತು ₹ 1 ಕೋಟಿ 4 ಲಕ್ಷ 9 ಸಾವಿರ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿರುತ್ತವೆ.
4. **ಶ್ರೀ ರಾಘಪ್ಪ ಲಾಲಪ್ಪ ಲಮಾಣಿ, ಸಹಾಯಕ ಅಭಿಯಂತರರು ಕೃ.ಭಾ.ಜ.ನಿ.ನಿ. ಎಫ್.ಆರ್.ಎಲ್. ಸರ್ವೆ ಉಪವಿಭಾಗ ನಂ. 2, ಬೀಳಗಿ, ಕ್ಯಾಂಪ್ ಆಲಮಟ್ಟಿ, ಬಾಗಲಕೋಟೆ.**
   ಬಾಗಲಕೋಟೆಯಲ್ಲಿ 2 ವಾಸದ ಮನೆಗಳು, 1 ಮಾರುತಿ ರಿಟ್ಜ್ ಕಾರ್, 1 ದ್ವಿ ಚಕ್ರ ವಾಹನ, ಚಿನ್ನ 334 ಗ್ರಾಂ, ಬೆಳ್ಳಿ 1 ಕೆ.ಜಿ 277 ಗ್ರಾಂ, ವಿವಿಧ ಬ್ಯಾಂಕ್ ಖಾತೆಗಳಲ್ಲಿ/ಠೇವಣಿಗಳು ₹ 2 ಲಕ್ಷ 88 ಸಾವಿರ ಪತ್ತೆಯಾಗಿರುತ್ತದೆ, ನಗದು ₹ 1 ಲಕ್ಷ 92 ಸಾವಿರ ಮತ್ತು ₹ 5 ಲಕ್ಷ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿರುತ್ತವೆ.

ಮೇಲ್ಕಂಡ 4 ಪ್ರಕರಣಗಳಲ್ಲಿ ತನಿಖೆ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ-ಪಾಸ್ತಿಗಳ ಹಾಗೂ ಬ್ಯಾಂಕ್ ಲಾಕರ್‌ಗಳ ಮೂಲದ ಬಗ್ಗೆ ತನಿಖೆ ಹಾಗೂ ದಾಖಲೆಗಳ ಪರಿಶೀಲನಾ ಕಾರ್ಯ ಹಾಗೂ ಸಂಬಂಧಪಟ್ಟ ಇನ್ನು ಹೆಚ್ಚಿನ ಸ್ಥಳಗಳ ಮಾಹಿತಿ ಸಂಗ್ರಹಣೆ ಮುಂದುವರೆದಿದೆ.

## ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ದತ್ತು ಸ್ವೀಕಾರ

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

**ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಮೈಸೂರು ಅವರು 50,000 ರೂ.ಗಳನ್ನು ಪಾವತಿಸಿ ಮೈಸೂರು ಮೃಗಾಲಯದ ಇಂಡಿಯನ್ ಗ್ರೇ ವೋಲ್ಫ್ , ಗ್ರೀನ್ ಅನಕೊಂಡ, ಎಮು, ಹಿಮಾಲಯನ್ ಗೋರಾಲ್, ಮತ್ತು ಸ್ಮೂತ್ ಕೊಟೆಡ್ ಆಟರ್ ಪ್ರಾಣಿಯನ್ನು ಒಂದು ವರ್ಷದ ಅವಧಿಗೆ ದತ್ತು ಸ್ವೀಕರಿಸಿರುತ್ತಾರೆಂದು ಪ್ರಕಟಣೆ ತಿಳಿಸಿದೆ.**

## ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ –2020

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ಕಾರ್ಮಿಕ ಇಲಾಖೆಯಿಂದ ಜೂನ್ 12 ರಂದು "ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ–2020 ಆಚರಿಸಲಾಗುತ್ತಿದೆ. ಪ್ರಸ್ತುತ ಕೋವಿಡ್–19 ರ ನಿಮಿತ್ತ ಈ ಬಾರಿ ಸರಳವಾಗಿ ಆಚರಿಸಲಾಗುವುದು. ಅಂದು ಕಲ್ಯಾಣ ಸುರಕ್ಷಾ ಭವನ, ಕಾರ್ಮಿಕ ಇಲಾಖೆ ಬನ್ನೇರುಘಟ್ಟ ರಸ್ತೆ, ಬೆಂಗಳೂರು ಇಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ನ್ಯಾಯಾಧೀಶರು, ಕಾರ್ಮಿಕ ಇಲಾಖೆ ಆಯುಕ್ತರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಅಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಭಿತ್ತಿ ಪತ್ರಗಳನ್ನು ಹಂಚುವುದು ಮತ್ತು ಆಟೋ ಮೂಲಕ ಪ್ರಚಾರ ಕೈಗೊಳ್ಳಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಮಲೆ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದಿಂದ ಮುಖ್ಯಮಂತ್ರಿಗಳ ಕೋವಿಡ್ ಪರಿಹಾರ ನಿಧಿಗೆ 50 ಲಕ್ಷ ರೂ.ಗಳ ದೇಣಿಗೆ

**ಬೆಂಗಳೂರು, ಜೂನ್ 11 (ಕರ್ನಾಟಕ ವಾರ್ತೆ)**

ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹಾಗೂ ಮುಜರಾಯಿ ಸಚಿವ ಶ್ರೀನಿವಾಸ ಪೂಜಾರಿಯವರು ಗುರುವಾರ ಬೆಳಗ್ಗೆ ವಿಧಾನಸೌಧದ ಮುಖ್ಯಮಂತ್ರಿಯವರ ಕಚೇರಿಯಲ್ಲಿ ಪ್ರಾಧಿಕಾರದ ಪರವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ 50 ಲಕ್ಷ ರೂ.ಗಳ ಚೆಕ್ ಹಸ್ತಾಂತರಿಸಿದರು.

ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು ಸ್ವಯಂ ಪ್ರೇರಣೆಯಿಂದ ನೀಡಿದ 3 ದಿನಗಳ ವೇತನ ಒಟ್ಟು 10 ಲಕ್ಷ ರೂ.ಗಳು, ಕರ್ನಾಟಕರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ನಿವೃತ್ತ ಅಧಿಕಾರಿಗಳು ಮತ್ತು ನೌಕರರ ಒಂದು ದಿನದ ಪಿಂಚಣಿ ಮೊತ್ತ ರೂ. 2,15,158 ಮತ್ತು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧಿಕಾರಿಗಳು ಮತ್ತು ನೌಕರರ ಒಂದು ದಿನದ ವೇತನ 1,92,816 ರೂ.ಗಳು ಒಟ್ಟು 64,07,974 ರೂ.ಗಳ ಚೆಕ್ಕು ಮುಖ್ಯಮಂತ್ರಿಗಳಿಗೆ ನೀಡಲಾಯಿತು.

ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಜಯವಿಭವ ಸ್ವಾಮಿ, ಹಾಗೂ ಪ್ರಾಧಿಕಾರದ ಸಿಬ್ಬಂದಿ ಹಾಜರಿದ್ದರು.